ದಿನಾಂಕ 23 ನೇ ಫೆಬ್ರವರಿ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಂ ಜಿ ಆರ್ ವಕೀಲರಿಂದ ಃ

ಜಾಗಲೆ ನಿಟ್ಟೂರು ಮುಖ್ಯ ರಸ್ತೆ ಡಾಂಬರು ರಸ್ತೆ ಎಂದರೆ ಸರಿ. ಸದರಿ ರಸ್ತೆ ತಿರುವು ತೆಗೆದುಕೊಂಡು ಅಳಮೆಂಗಡ ಕುಟುಂಬದವರ ಸ್ವತ್ತಿನಲ್ಲಿ, ಪೊರಂಗಡ ಕುಟುಂಬದವರ ಸ್ವತ್ತಿನಲ್ಲಿ, ಮಾಚಂಗಡ ಕುಟುಂಬದವರ ಸ್ವತ್ತಿನಲ್ಲಿ, ಮಾಪಂಗಡ ಕುಟುಂಬದವರ ಸ್ವತ್ತಿನಲ್ಲಿ, ಮಲ್ಲೆಂಗಡ ಕುಟುಂಬದವರ ಸ್ವತ್ತಿನಲ್ಲಿ ಸದರಿ ರಸ್ತೆ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆ ಜಾಗಲೆ ನಿಟ್ಟೂರು ಮುಖ್ಯ ರಸ್ತೆ ಬದಿ ಇದೆ. ನಮ್ಮ ಮನೆಯಿಂದ ವಾದಿಯವರ ಸ್ವತಿಗ್ಗೆ ಸುಮಾರು 500 ಮೀ ದೂರ ಇದೆ. 1970 ರಲ್ಲಿ ವಾದಿಯವರ ತಂದೆಯ ಮನೆಯಲ್ಲಿ ಆಗಿದೆ ಎಂದು ಹೇಳುವ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲ ಆಗ ನಾನು ಇನ್ನೂ ಜನಿಸಿರಲಿಲ್ಲ ಎನ್ನುತ್ತಾರೆ. ವಾದಿಗೆ ಸರ್ವೆ ನಂ. 77/5, 77/22, 77/21 ಬಿ ಹಾಗೂ ಸರ್ವೆ ನಂ. 57 ರಲ್ಲಿ ಸ್ವತ್ತಗಳಿವೆ ಎನ್ನುತ್ತಾರೆ. ಸದರಿ ಆಸ್ತಿಗಳಲ್ಲಿ ವಾದಿಗೆ 1970 ರ ವಿಭಾಗದಂತೆ 1/3 ಭಾಗ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ. 99 ರಲ್ಲಿ ಅರಮನೆ ಕಡಂಗ ಇದೆ ಎಂದರೆ ಸರಿ. ಮಲ್ಚೀರ ಕುಟುಂಬದವರು ಸರ್ವೆ ನಂ. 99 ರಲ್ಲಿ 50 ವರ್ಷದ ಹಿಂದೆ ತೋಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸುಮಾರು 8 ರಿಂದ 10 ವರ್ಷದ ಹಿಂದೆ ತೋಟ ಮಾಡಿರಬಹುದು ಎನ್ನುತ್ತಾರೆ. ಸದರಿ ಕಡಂಗದಲ್ಲಿ ಪ್ರತಿವಾದಿಯವರು 50 ವರ್ಷದ ಹಿಂದಿನಿಂದಲೂ ಸ್ವಾಧೀನದಲ್ಲಿದ್ದಾರೆ ಹಾಗೂ ಸದರಿ ಕಡಂಗದಲ್ಲಿ ಹಳೆಯ ಮರಗಳು ಇದ್ದವು ಎಂದರೆ ಸರಿಯಲ್ಲ. ಸದರಿ ಕಡಂಗದಲ್ಲಿ ರಸ್ತೆ ಹಾಗೂ ಖಾಲಿ ಜಾಗ ಇತ್ತು ಮತ್ತು ಸದರಿ ಕಡಂಗದ ಬದಿಯಲ್ಲಿ ಮರಗಳು ಇವೆ ಎನ್ನುತ್ತಾರೆ. ನಾನು ಹೇಳಿದಂತೆ ಸದರಿ ಕಡಂಗದಲ್ಲಿ ಯಾವುದೇ ರಸ್ತೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ನಮ್ಮ ಊರಿನವರು ಎನ್ನುತ್ತಾರೆ. ನನಗೆ ದಾವೆ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.